ಬೆಂಗಳೂರು ಉತ್ತರ ವಿಶ್ವವಿದ್ಯಾಲಯ

**BENGALURU NORTH UNIVERSITY**

**ಟಮಕ, ಕೋಲಾರ – 563103**

ಸಂಖ್ಯೆ: ಬೆಂಉವಿ/ಸೇ.ಜ್ಯೆ./ಪ್ರಾಂ–ಬೋ/2374/2021–22 ದಿನಾಂಕ: 04.01.2021

**–: ಸುತ್ತೋಲೆ :–**

**ವಿಷಯ: ಸೇವಾ ಜ್ಯೇಷ್ಠತಾ ಪಟ್ಟಿ (Seniority List) ಸಿದ್ಧಪಡಿಸಲು ಪ್ರಾಂಶುಪಾಲರು ಹಾಗೂ ಎಲ್ಲಾ ವಿಷಯಗಳ ಬೋಧಕ ಸಿಬ್ಬಂದಿಯ ಮಾಹಿತಿಯನ್ನು ಒದಗಿಸುವ ಕುರಿತು.**

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಮೂಲಕ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರಿಗೆ ತಿಳಿಯಪಡಿಸುವುದೇನೆಂದರೆ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯವು ಪ್ರಾಂಶುಪಾಲರ ಹಾಗೂ ಬೋಧಕ ಸಿಬ್ಬಂದಿಯ ವಿಷಯವಾರು ಸೇವಾ ಜ್ಯೇಷ್ಠತಾ ಪಟ್ಟಿ (Seniority List)ನ್ನು ತಯಾರಿಸಿ, ಸೇವಾ ಹಿರಿತನದ ಮೇರೆಗೆ ವಿಶ್ವವಿದ್ಯಾಲಯದ ವಿವಿಧ ಪ್ರಾಧಿಕಾರಗಳಿಗೆ ನೇಮಿಸಲು ಮಾಹಿತಿ ನೀಡಬೇಕಾಗಿರುತ್ತದೆ. ಆದ್ದರಿಂದ, ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರ ಹಾಗೂ ಎಲ್ಲಾ ವಿಷಯಗಳ ಬೋಧಕ ಸಿಬ್ಬಂದಿಯ ಮಾಹಿತಿಯನ್ನು ನೀಡಲಾಗಿರುವ https://ee.kobotoolbox.org/single/OwsVNqcw ಈ ಫಾರ್ಮ್‌ನಲ್ಲಿ ಭರ್ತಿಮಾಡತಕ್ಕದ್ದು, ಜೊತೆಗೆ ಸಂಬಂಧಿಸಿದ ಭೌತಿಕ ದಾಖಲೆ(Hard Copies)ಗಳಿಗೆ ಸ್ವದೃಢೀಕರಣ(Self Attested)ಮಾಡಿ ಒಂದು ಪ್ರತಿ(One Set)ಯನ್ನು **'ಕುಲಸಚಿವರು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ–563103'** ವಿಳಾಸಕ್ಕೆ ಖುದ್ದು(in person) ಅಥವಾ ನೋಂದಾಯಿತ ಅಂಚೆ(Registered Post) ಮೂಲಕ **ದಿನಾಂಕ: 15.01.2022ರೊಳಗಾಗಿ** ತಲುಪಿಸಲು ಸೂಚಿಸಿದೆ. ಈ ಕುರಿತು ಆಯಾ ಕಾಲೇಜುಗಳ ಪ್ರಾಂಶುಪಾಲರು, ಎಲ್ಲಾ ಬೋಧಕ ಸಿಬ್ಬಂದಿಯು ಕಡ್ಡಾಯವಾಗಿ ಮಾಹಿತಿಯನ್ನು ನೀಡುವಂತೆ ಕ್ರಮಕೈಗೊಳ್ಳುವುದು.

**ಸೂಚನೆ: ಕೊನೆಯ ದಿನಾಂಕದ ನಂತರ ಪೋರ್ಟಲ್‌ನ್ನು ಬ್ಲಾಕ್(Block) ಮಾಡಲಾಗುವುದು ಹಾಗೂ ಭೌತಿಕದಾಖಲೆಗಳನ್ನು ಕೂಡ ತಿರಸ್ಕರಿಸಲಾಗುವುದು.**

**ಕುಲಸಚಿವರು**
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಟಮಕಾ, ಕೋಲಾರ–ಕರ್ನಾಟಕ–563 103.

**ಗೆ,**

ಪ್ರಾಂಶುಪಾಲರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಎಲ್ಲಾ ಸಂಯೋಜಿತ ಕಾಲೇಜುಗಳು

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತಶಾಖೆ, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ – 563103.
2. ಆಪ್ತಶಾಖೆ, ಕುಲಸಚಿವರು(ಮೌ)/ವಿತ್ತಾಧಿಕಾರಿಗಳು, ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಟಮಕ, ಕೋಲಾರ – 563103.
3. ಕಛೇರಿ ಪ್ರತಿ.